ಮುಳುಗಿದಳು.

ಬೋರ್ಡಿಂಗ್ ಅನೌನ್ಸ್ ಆಯಿತು. ಪ್ರಿಯಾರಿಟಿ ಬೋರ್ಡಿಂಗ್ ಅವಕಾಶ ಇದ್ದ ಕಾರಣ ಇವನು ಎದ್ದು ಮೊದಲೇ ಸಾಲು ಸೇರಿಕೊಂಡ. ಆಕೆ ಅಲ್ಲಿಯೇ ಕೂತಿದ್ದಳು. ಫ್ಲೈಟ್ ಒಳ ಹೊಕ್ಕವ 1D ಸೀಟ್‌ನಲ್ಲಿ ಸೀಟ್ ಬೆಲ್ಟ್ ಹಾಕದೆಯೇ ಕೂತು, ಒಮ್ಮೆ ತನ್ನ ಮಾಸ್ಕ್ ತೆಗೆದು ಏರ್ ಹೊಸ್ಟೆಸ್ ಕೊಟ್ಟ ಬಾಟಲ್‌ನಿಂದ ನೀರು ಕುಡಿದು ಕಣ್ಣು ಮುಚ್ಚಿದ. ನಿದ್ರೆ, ಆಯಾಸ, ಗೊಂದಲ...

ಈ ಎಲ್ಲದರ ನಡುವೆ ಆ ಕಣ್ಣುಗಳು. ಅವುಗಳು ಸೂಸುತ್ತಿದ್ದದ್ದು ನಿರ್ಮಲ ಸ್ನೇಹವನ್ನೋ? ಪ್ರೇಯಸಿಯ ಪ್ರೀತಿಯನ್ನೋ? ಅಮ್ಮನ ವಾತ್ಸಲ್ಯವನ್ನೋ? ಬದುಕಿನ ಬಗೆಗಿನ ಭರವಸೆಯೋ?

ನಾನು ಹಾತೊರೆಯುತ್ತಿರುವುದು ಯಾವುದಕ್ಕೆ?

ಈ ಗೊಂದಲವೇ ಇವನ ಎದೆಯಾಳದಲ್ಲಿ ಹಾಲಾಹಲವನ್ನೆಬ್ಬಿಸಿತ್ತು.

ಬೋರ್ಡಿಂಗ್ ಮುಗಿಯುವ ಹೊತ್ತಿಗೆ ಕೊನೆಯವಳಾಗಿ ಫ್ಲೈಟ್ ಒಳಕ್ಕೆ ಹೆಜ್ಜೆ ಹಾಕಿದ ಅವಳು, ಪಕ್ಕದಲ್ಲಿಯೇ ಹಾದು ಹೋಗುವಾಗ ಕೂಡ ಇವನತ್ತಲೇ ನೋಡುತ್ತಾ ತನ್ನ ಕಣ್ಣುಗಳ ಮೂಲಕ ಮತ್ತೊಮ್ಮೆ ಆಪೋಷನಗೊಂಡಳು. ಆ ಕ್ಷಣದಲ್ಲಿ ಕಣ್ಣು ತೆರೆದು ಅವಳತ್ತ ದೃಷ್ಟಿ ಹಾಯಿಸಿದ್ದ ಇವನು ಅದುರಿ ಹೋದ.

ಮೂರನೇ ಸಾಲಿನಲ್ಲಿ 3F ಸೀಟಲ್ಲಿ ಹೋಗಿ ಅವಳು ಕೂತ ಕೆಲವೇ ಕ್ಷಣಗಳಲ್ಲಿ 'ಬೋರ್ಡಿಂಗ್ ಕಂಪ್ಲೀಟೆಡ್' ಘೋಷಣೆ ಹೊರಬಿತ್ತು.

ನಲವತ್ತೈದು ನಿಮಿಷ. ಇವ 1Dಯಲ್ಲಿ ಕೂತಿದ್ದರು, ಮನಸ್ಸು- ಹೃದಯ 3Fನಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಈ ನಡುವೆ, 'ಏನಾದರೂ ಆಗಲಿ, ವಿಮಾನದಿಂದ ಕೆಳಗಿಳಿದ ಕೂಡಲೇ ಹಾಯ್ ಹೇಳಿ ಪರಿಚಯ ಮಾಡಿಕೊಂಡು, ಫೋನ್ ನಂಬರ್‌ಗಳನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳೋದೇ' ಎಂಬ ನಿರ್ಧಾರಕ್ಕೆ ಬಂದವ ಸ್ವಲ್ಪ ಹೊತ್ತು ನಿದ್ರೆ ಮಾಡುವ ಯತ್ನ ಮಾಡಿದ.

ಟರ್ಮಿನಲ್ ಒಂದರಲ್ಲಿ ಇಳಿದ ವಿಮಾನ ಏರೋಬ್ರಿಜ್ ಬಳಿ ಬಂದು ಅಂಟಿಕೊಂಡಾಗ ಇವನು ಸಮಾಧಾನದಿಂದ ನಿಟ್ಟುಸಿರುಬಿಟ್ಟ. ಏಕೆಂದರೆ... ಏರೋಬ್ರಿಜ್ ಮೂಲಕವಾದರೆ ಅವಳು ನನಗಿಂತ ಏಳೆಂಟು ಜನರ ಹಿಂದೆ ನಡೆದೇ ಬ್ಯಾಗೇಜ್ ಕಲೆಕ್ಷನ್ ವಿಭಾಗಗಕ್ಕೆ ಬರಬೇಕಿತ್ತು.

ಏರೋಬ್ರಿಜ್ ಮೂಲಕ ಹೆಜ್ಜೆ ಹಾಕುವಾಗ ಸ್ವಲ್ಪ ನಿಧಾನಿಸಿದ ಇವನು, ಅವಳು ಅಕ್ಕಪಕ್ಕ ಬಂದಾಳೆಂದು ಅಂದಾಜು ಹಾಕುತ್ತಲೇ ಮುನ್ನಡೆದ. ಮೊದಲ ಮಹಡಿಯಿಂದ ಕೆಳಗಿಳಿಯುವಾಗ ಎಸ್ಕಲೇಟರ್ ಮೇಲೆ ನಿಂತಿದ್ದವ ಒಮ್ಮೆ ಹಿಂದಿರುಗಿ ನೋಡಿದ. ಇವನ ಎಣಿಕೆಯಂತೆಯೇ ಅವಳು ಬೆನ್ನ ಹಿಂದೆಯೇ ಇದ್ದಳು. ಎಸ್ಕಲೇಟರ್ ಇಳಿದು, ಬ್ಯಾಗೇಜ್ ಕಲೆಕ್ಷನ್ ವಿಭಾಗ ತಲುಪುವ ಮೊದಲೇ, ಇವನು ಹಿಂತಿರುಗಿ ನೋಡಿ ಅವಳ ಬರುವಿಕೆಗಾಗಿ ಕಾದು ನಿಂತ. ಆಕೆ ಇವನತ್ತಲೇ ಬರುತ್ತಿದ್ದಳು. ಅವಳ ಆ ಕಣ್ಣುಗಳು ಕೂಡ ಇವನ ಮೇಲೆಯೇ ಇದ್ದವು.

ನಡುವೆ ಟ್ರಾನ್ಸಿಟ್ ಕೌಂಟರ್!

ಅದರ ಬಳಿ ಬಂದವಳೇ, ಮಾಸ್ಕ್ ತೆಗೆದು ಇವನತ್ತ ತಿರುಗಿ ನೋಡಿ, ನಸು ನಗು ಸೂಸಿ, ಕೈ ಬೀಸಿ, ಕಣ್ಣಲ್ಲೇ ಬೈ-ಬೈ ಹೇಳಿ... ಟ್ರಾನ್ಸಿಟ್ ಗೇಟ್ ಒಳಗೆ ಹಾದು ಹೋದಳು. ಆ ಮುಂಗುರುಳು. ಮುಗುಳ್ನಗು. ಬಳಕುವ ದೇಹಕ್ಕಂಟಿಕೊಂಡಿದ್ದ ನೀಲಿ ಚೂಡಿದಾರ್. ಸೆಳೆದು ಆಪೋಷನಗೊಂಡಿದ್ದ ಆ ಕಣ್ಣುಗಳು. ಬಕಾರ್ಟ್ ರೋಗ್ 450 ಕಂಪು.

ಟ್ರಾನ್ಸಿಟ್‌ನಲ್ಲಿ ಮರೆಯಾದ ಅವಳನ್ನೇ ನೋಡುತ್ತಾ ನಿಂತಿದ್ದ ಇವನು.

ಅನಿವಾರ್ಯವಾಗಿ ಬ್ಯಾಗೇಜ್ ಕಲೆಕ್ಷನ್/ಎಕ್ಸಿಟ್ ಕಡೆಗೆ ಹೆಜ್ಜೆ ಹಾಕಿದ.

ಈ ಹಾತೊರೆಯುವಿಕೆ...

ಬದುಕಿನ ಭವಿಷ್ಯದ ಬಗೆಗಿನ ನಂಬಿಕೆಯೇ?

ಮರಳಿ ಪುಟದೇಳುವ ಬಯಕೆಯ ಸಂಕೇತವೇ?

ಎದೆಯಾಳದಲ್ಲಿ ಎದ್ದ ಆ ವಿಪ್ಲವ ಬಯಸುತ್ತಿರುವುದೇನನ್ನು...

ಸ್ನೇಹವನ್ನೋ?

ಪ್ರೀತಿಯನ್ನೋ?

ವಾತ್ಸಲ್ಯವನ್ನೋ? ಅಥವಾ... ಮರಳಿ ಎಲ್ಲವನ್ನೋ...

●